ಫ್ಯಾಕ್ಸ್: 08282–256262
ಇ–ಮೇಲ್: drsyndicateku@gmail.com

☎08282–256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

**ಕುವೆಂಪು ವಿಶ್ವವಿದ್ಯಾಲಯ**

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ– 577 451

---

ಸಂಖ್ಯೆ: ಕುವಿ:ಯುಎಟಿ–2:93B:04 :2022–23 ದಿನಾಂಕ:03-04-2023

# ಸುತ್ತೋಲೆ

ವಿಷಯ : 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವ ಕುರಿತು.

* * *

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 19ನೇ ಸಾಮಾನ್ಯ ಸಭೆಯಲ್ಲಿ ಪ್ರೊ. ಓ. ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಾರ್ಷಿಕ ವರದಿಯ ಪುನರಾವಲೋಕನ ಸಮಿತಿಯು ಸಲ್ಲಿಸಿದ್ದ ವರದಿಯ ಮಾನದಂಡಗಳನ್ವಯ ಇನ್ನು ಮುಂದೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ನಿಗದಿತ ನಮೂನೆಯಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಗಿರುತ್ತದೆ. ಅದರಂತೆ 2022–23ನೇ ಸಾಲಿನ (ದಿನಾಂಕ:01–04–2022 ರಿಂದ ದಿನಾಂಕ:31–03–2023 ರವರೆಗೆ) ವಾರ್ಷಿಕ ವರದಿಯನ್ನು ಪ್ರತಿ ವಿಭಾಗದವರು ಸಿದ್ಧಪಡಿಸಬೇಕಾಗಿರುತ್ತದೆ. ಆದ್ದರಿಂದ ತಮ್ಮ ವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ನಿಗಧಿತ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ, ಪ್ರಾಧಿಕಾರ ವಿಭಾಗಕ್ಕೆ Soft ಮತ್ತು Hard Copy ಯಲ್ಲಿ **ದಿನಾಂಕ:31–05–2023**ರ ಒಳಗಾಗಿ ತಪ್ಪದೇ ಕಳುಹಿಸಿಕೊಡಲು ಸೂಚಿಸಲಾಗಿದೆ.

**ವಿಶೇಷ ಸೂಚನೆಗಳು :**

1. ವಾರ್ಷಿಕ ವರದಿಯು ದಿನಾಂಕ:01–04–2022 ರಿಂದ ದಿನಾಂಕ:31–03–2023ರ ಅವಧಿಯದ್ದಾಗಿರುತ್ತದೆ.
2. **ಕನ್ನಡ ಹಾಗೂ ಆಂಗ್ಲ** ಭಾಷೆಯಲ್ಲಿ ತಮ್ಮ ವಿಭಾಗಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ಸಿ.ಡಿಯಲ್ಲಿ ಕ್ರೋಢೀಕರಿಸಿ ಮುದ್ರಿಸಿದ ವರದಿಯನ್ನು **Hard Copy & Soft Copy** ಯ ಪ್ರತಿಯೊಂದಿಗೆ ಪ್ರಾಧಿಕಾರಗಳ ವಿಭಾಗಕ್ಕೆ ಹಾಗೂ ಇ-ಮೇಲ್ ವಿಳಾಸ : drsyndicateku@gmail.com ಕ್ಕೂ ಸಹ ಕಳುಹಿಸುವುದು.
3. ***ಕನ್ನಡ ವಾರ್ಷಿಕ ವರದಿಯು ನುಡಿ(ಒಣಜು 01ಜ) ಫಾಂಟ್ ಸೈಜ್ 12ರಲ್ಲಿಯೇ ಇರತಕ್ಕದ್ದು.***
4. ***ಇಂಗ್ಲೀಷ್ ವಾರ್ಷಿಕ ವರದಿಯು Times New Roman, ಫಾಂಟ್ ಸೈಜ್ 12ರಲ್ಲಿಯೇ ಇರತಕ್ಕದ್ದು.***
5. ***ವಾರ್ಷಿಕ ವರದಿಯು ಎ4 ಹಾಗೂ ಪೋರ್ಟ್‌ರೇಟ್ ಅಳತೆಯಲ್ಲಿ ಇರತಕ್ಕದ್ದು.***
6. ***ಪ್ರತಿ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಿದ್ಧಪಡಿಸಿದ ನಿಗದಿತ ನಮೂನೆಯನ್ನು ವಿಶ್ವವಿದ್ಯಾಲಯದ ಅಂತರ್‌ಜಾಲ www.kuvempu.ac.in ನಲ್ಲಿ ಪ್ರಕಟಿಸಲಾಗಿದೆ.***

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

1) ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3) ನಿರ್ದೇಶಕರು: ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ/ ಕಾಲೇಜು ಅಭಿವೃದ್ಧಿ ಪರಿಷತ್/ಶಾರೀರಿಕ ಶಿಕ್ಷಣ/ವಿದ್ಯಾರ್ಥಿ ಕ್ಷೇಮಪಾಲನಾ/ಕ್ರೀಡಾ ವಿಭಾಗ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ/ ಅಂತರಾಷ್ಟ್ರೀಯ ವಿದ್ಯಾರ್ಥಿ ಘಟಕ /ಐ.ಕ್ಯೂ.ಎ.ಸಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4) ನಿರ್ದೇಶಕರು, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸುತ್ತೋಲೆಯಲ್ಲಿರುವ ಮಾಹಿತಿಯನ್ನು ಸೇರ್ಪಡಿಸುವುದು/ ಬದಲಾಯಿಸುವುದು.
5) ಉಪಕುಲಸಚಿವರು, ಮಾನವ ಸಂಪನ್ಮೂಲ ಮತ್ತು ನಿರ್ವಹಣಾ ವಿಭಾಗ/ಶೈಕ್ಷಣಿಕ ವಿಭಾಗ/ಅಭಿವೃದ್ಧಿ ವಿಭಾಗ/ಎಸ್ಟೇಟ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.